

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ವಿಧಾನಸೌಧದ ಪ್ರವೇಶ ಪರೀಕ್ಷೆ....

**ಪ್ರ**ತಿ ವರ್ಷ ಮೇ ತಿಂಗಳು ಬಂತೆಂದರೆ ಬಹುತೇಕ ಶಾಲಾ-ಕಾಲೇಜುಗಳ ಪರೀಕ್ಷೆಗಳು ಮುಗಿದು ಫಲಿತಾಂಶಗಳೂ ಬಂದಿರುತ್ತವೆ. ವೃತ್ತಿಪರ ಕಾಲೇಜುಗಳಿಗೆ ಪ್ರವೇಶ ಪರೀಕ್ಷೆಯೂ ನಡೆದು ಹೊಂಗನಸಿನ ಹದಿಹರೆಯದ ವಿದ್ಯಾರ್ಥಿಗಳು ಸಿ.ಇ.ಟಿ. ಫಲಿತಾಂಶ ಮತ್ತು ಕೌನ್ಸಿಲಿಂಗ್‌ಗಾಗಿ ಕಾಯುತ್ತಿರುತ್ತಾರೆ. ಈ ವರ್ಷದ ವಿಶೇಷವೆಂದರೆ ವೃತ್ತಿಪರ ವಿದ್ಯಾರ್ಥಿಗಳಂತೆ ವೃತ್ತಿನಿರತ ರಾಜಕಾರಣಿಗಳು ಹಿಂದಿನ ಸಾರಿ ಆಯ್ಕೆಯಾಗಿ ಸೇರಿದ್ದ 'ಕೋರ್ಸ್'ನ್ನು ಮುಗಿಸದೆ ಅರ್ಧಕ್ಕೇ ನಿಲ್ಲಿಸಿ ಮತ್ತೆ ಹೊಸದಾಗಿ ಅದೇ ವಿಧಾನಸೌಧದ 'ಪ್ರವೇಶ ಪರೀಕ್ಷೆ'ಗೆ ಕುಳಿತಿರುವುದು. ರಾಜ್ಯದ ಒಟ್ಟು 224 ಸೀಟುಗಳಿಗೆ 2242 ಜನ ಅಭ್ಯರ್ಥಿಗಳು ಕುಳಿತಿದ್ದಾರೆ. ಅಂದರೆ ಒಂದು ಸೀಟಿಗೆ ನೂರರಂತೆ. ಎಲ್ಲಾ ಪೇಮೆಂಟ್ ಸೀಟುಗಳೇ. ಮೆರಿಟ್ ಸೀಟುಗಳು ಒಂದೂ ಇಲ್ಲ. ಈಗಾಗಲೇ ಎರಡು ಪೇಪರ್ ಮುಗಿದಿದ್ದು ಇನ್ನೊಂದು ಪೇಪರ್ ಬಾಕಿ ಉಳಿದಿದೆ. ಅದೂ ನಾಳೆಗೆ ಮುಗಿಯುತ್ತದೆ. ವಿದ್ಯಾರ್ಥಿಗಳು ಸಾಮಾನ್ಯ ಪ್ರವೇಶ ಪರೀಕ್ಷೆಯ ಫಲಿತಾಂಶವನ್ನು ಎದುರು ನೋಡುತ್ತಿದ್ದರೆ, ರಾಜಕಾರಣಿಗಳು ವಿಧಾನಸೌಧದ 'ಪ್ರವೇಶ ಪರೀಕ್ಷೆ'ಯ ಫಲಿತಾಂಶವನ್ನು ಎದುರು ನೋಡುತ್ತಿದ್ದಾರೆ. ಎಲ್ಲರೂ ಅವರವರ ಮನೆದೇವರುಗಳಿಗೆ ಮತ್ತು ಮಠದ ಸ್ವಾಮಿಗಳವರಿಗೆ ಸಾಕಷ್ಟು ಕಾಣಿಕೆ ಕೊಟ್ಟು ಅಡ್ಡಬಿದ್ದಿದ್ದು ಎಲ್ಲರೂ ಹೆಚ್ಚಿನ ಬಹುಮತದಿಂದ ಗೆಲ್ಲುತ್ತೇವೆಂಬ ಆತ್ಮವಿಶ್ವಾಸದಿಂದಲೇ ಇದ್ದಾರೆ. ಒಬ್ಬರು ಸ್ವಾಮಿಗಳಂತೂ ಬಹಿರಂಗವಾಗಿಯೇ ತಮ್ಮ ಶಿಷ್ಯನ ಪರವಾಗಿ ಮನೆ ಮನೆಗೆ ಹೋಗಿ ಮತ ಯಾಚಿಸುವ ಶಿಷ್ಯವಾತ್ಸಲ್ಯವನ್ನು ತೋರಿಸಿದ್ದಾರೆ. ಪರೀಕ್ಷೆಯಲ್ಲಿ ಫೇಲಾದ ದುರ್ಬಲ ಮನಸ್ಸಿನ ಕೆಲವು ವಿದ್ಯಾರ್ಥಿಗಳು ಹತಾಶರಾಗಿ ನೇಣು ಹಾಕಿಕೊಂಡೋ, ವಿಷ ಸೇವಿಸಿಯೋ, ಹೊಳೆ, ಬಾವಿ, ರೈಲಿಗೆ ಬಿದ್ದೋ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ಕೇಳಿದ್ದೀರಿ. ಆದರೆ ಆಶ್ಚರ್ಯದ ಸಂಗತಿಯೆಂದರೆ ಚುನಾವಣೆಯಲ್ಲಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿಯೂ ಸೋತ ಯಾವ ರಾಜಕಾರಣಿಯೂ ಆತ್ಮಹತ್ಯೆ ಮಾಡಿಕೊಂಡ ಒಂದೂ ಉದಾಹರಣೆ ಇದ್ದಂತಿಲ್ಲ. ಎಂತಹ ಗಂಡೆದೆಯವರಿರಬೇಕು? ಜುಜುಬಿ ಸಾಲ ಮಾಡಿಕೊಂಡು ಹತಾಶರಾಗಿ ಆತ್ಮಹತ್ಯೆ ಮಾಡಿಕೊಳ್ಳುವ ರೈತರು ಇವರಿಂದ ಬದುಕುವ ಕಲೆಯನ್ನು ಕಲಿಯಬೇಕು. ಆತ್ಮಹತ್ಯೆ ಮಾಡಿಕೊಳ್ಳಲು ಈ ರಾಜಕಾರಣಿಗಳಿಗೆ ಆತ್ಮ ಇದ್ದರೆ ತಾನೆ ಎಂದು ನೀವು ಉದ್ಗರಿಸುತ್ತೀರೋ ಏನೋ! ಸದ್ಯ ಗೆದ್ದವರು ವಿಧಾನಸೌಧದ ಕುರ್ಚಿಗಾಗಿ ಮತ್ತೆ ಗುದ್ದಾಡಿ ಜನರನ್ನು ಸಾಯಿಸದೇ ಇದ್ದರೆ ಸಾಕು! ಅಂತೂ ಈ ವಾರಾಂತ್ಯಕ್ಕೆ ರಂಜನೀಯವಾದ ಹೊಸದೊಂದು ಕನ್ನಡ ಧಾರಾವಾಹಿ ಆರಂಭವಾಗುತ್ತದೆ...!

ನಮ್ಮಲ್ಲಿ ಕುಡುಕ ತಂದೆ ತನ್ನ ಮಗ ತನ್ನಂತೆ ಕುಡುಕನಾಗಬಾರದೆಂದು ಹೇಗೆ ಬಯಸುತ್ತಾನೆಯೋ ಹಾಗೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಜನರು ತಾವು ನೈತಿಕವಾಗಿ ಎಷ್ಟೇ ಅಧಃಪತನ ಹೊಂದಿದ್ದರೂ ತಮ್ಮ ನಾಯಕರು ಮಾತ್ರ ನೀತಿವಂತರಾಗಿರಬೇಕು, ಶ್ರೀರಾಮಚಂದ್ರನಂತಿರಬೇಕು ಎಂದು ಬಯಸುತ್ತಾರೆ. ಅಲ್ಲಿಯ ಪತ್ರಿಕೆಗಳು ರಾಜಕಾರಣಿಗಳ ಜನ್ಮಕುಂಡಲಿಯನ್ನು ಜಾಲಾಡಿಬಿಡುತ್ತವೆ. ವಿವಾಹ ವಿಚ್ಛೇದಿತನೆಂಬ ಒಂದೇ ಒಂದು ಕಾರಣಕ್ಕಾಗಿ ನೆಲ್ಸನ್ ರಾಕ್‌ಫೆಲ್ಲರ್ ಅಮೇರಿಕಾದ ಅಧ್ಯಕ್ಷನಾಗಲು ಸಾಧ್ಯವಾಗಲಿಲ್ಲ. ಯಾರು ಎಷ್ಟೇ ದೊಡ್ಡ ಸ್ಥಾನದಲ್ಲಿದ್ದರೂ ಚರಿತ್ರಹೀನರೆಂದು ತಿಳಿದುಬಂದರೆ ಅಂಥವರು ಒಂದು ಕ್ಷಣ ಅಧಿಕಾರದಲ್ಲಿ ಮುಂದುವರಿಯಲು ಅಲ್ಲಿ ಸಾಧ್ಯವಿಲ್ಲ. ಆದರೆ ನಮ್ಮಲ್ಲಿ ಹಾಗಲ್ಲ, ರಾಜಕಾರಣದಲ್ಲಿ ಅವರದೇ ಮೇಲುಗೈ. ಸಾಮಾನ್ಯ ಜನರಲ್ಲಿ ತಮ್ಮ ನಾಯಕನ ವೈಯಕ್ತಿಕ ಜೀವನವನ್ನು ಕಟ್ಟಿಕೊಂಡು ನಮಗೇನಾಗಬೇಕೆಂಬ ಮನೋಭಾವ! 'ಯಾರೇನು ಶುದ್ಧ?' ಎಂಬ ಸಮರ್ಥನೆ ಬೇರೆ! ಜನರ ಈ ಧಾರಾಳತನದಿಂದಾಗಿಯೇ ಮೂರನೆಯ ಸುತ್ತಿನಲ್ಲಿ 36 ಅಭ್ಯರ್ಥಿಗಳು ಕ್ರಿಮಿನಲ್ ಹಿನ್ನೆಲೆಯುಳ್ಳವರೆಂದು ಪತ್ರಿಕೆಗಳು ವರದಿ ಮಾಡಿದ್ದರೂ ಬಹುತೇಕ ಗೆದ್ದು ಬರುವವರು ಅವರೇ.

ಚುನಾವಣೆ ಹತ್ತಿರ ಬಂದಾಗ ಬಹಳಷ್ಟು ರಾಜಕೀಯ ಧುರೀಣರು ಟಿಕೆಟ್ ಕೊಡಿಸಿ ಎಂದು ಮಠಕ್ಕೆ ಬಂದು ದುಂಬಾಲು ಬೀಳುತ್ತಾರೆ. ಇವರಲ್ಲಿ ಲಕ್ಷಣವಾಗಿ ಮನೆಯಲ್ಲಿ ಇದ್ದು ಮೊಮ್ಮಕ್ಕಳನ್ನು ಆಡಿಸಿಕೊಂಡಿರಬೇಕಾದ ಇಳಿವಯಸ್ಸಿನ ಮುದುಕರೇನೂ ಕಡಿಮೆ ಇಲ್ಲ, ಸದ್ಯ ಹೆಣ್ಣು ಕೊಡಿಸಿ ಎಂದು ಕೇಳಲು ಅವರು ದುಂಬಾಲು ಬೀಳದೆ ಇರುವುದು ನಮ್ಮ ಪುಣ್ಯ! ಇವರೆಲ್ಲರ ಹಿಂದೆ ಇರುವ ತತ್ವ ಒಂದೇ - ಅದು ಅಧಿಕಾರ ಲಾಲಸೆ. ಗೆಲ್ಲುವ ಪಕ್ಷಕ್ಕೆ ಲಾಗ ಹಾಕಿ ಸುಲಭವಾಗಿ ಅಧಿಕಾರ ಗದ್ದುಗೆ ಹಿಡಿಯುವ ಹವಣಿಕೆ. `All is fair in love and war'

ಎಂಬುದರ ಜೊತೆಗೆ ರಾಜಕೀಯವನ್ನೂ ಈಗ ಸೇರಿಸಬೇಕಾಗಿದೆ. ರಾಜಕೀಯದಲ್ಲಿ ಅಧಿಕಾರ ಹಿಡಿಯಲು ಏನು ಮಾಡಿದರೂ ನಡೆಯುತ್ತದೆ ಎಂಬಂಥ ಸ್ಥಿತಿ ಇಂದು ಉಂಟಾಗಿದೆ.

ಈಗ ಯಾವ ಪಕ್ಷದಲ್ಲಿಯೂ ಯಾವ ತತ್ವ ಸಿದ್ಧಾಂತವೂ ಉಳಿದಿಲ್ಲ. ಯಾರು ಯಾವಾಗ ಯಾವ ಪಕ್ಷದಲ್ಲಿ ಇರುತ್ತಾರೆ ಎಂದು ಹೇಳುವುದು ಕಷ್ಟ. ಆದರೆ ಎಲ್ಲಿಯವರೆಗೆ ಇರುತ್ತಾರೆ ಎಂಬುದಂತೂ ಸ್ಪಷ್ಟ. ಟಿಕೆಟ್ ಸಿಕ್ಕರೆ ಈ ಪಕ್ಷ, ಸಿಗದಿದ್ದರೆ ಆ ಪಕ್ಷ. 'ಯೇನ ಕೇನ ಪ್ರಕಾರೇಣ' ಟಿಕೆಟ್ ಗಿಟ್ಟಿಸುವುದೇ ಅವರ ಪರಮ ಗುರಿ. ಇಲ್ಲಿಯವರೆಗೂ ಒಂದು ಪಕ್ಷವನ್ನು ವಾಚಾಮಗೋಚರವಾಗಿ ಬೈಯುತ್ತಿದ್ದವನು ದಿನಬೆಳಗಾಗುವುದರೊಳಗೆ ಆ ಪಕ್ಷ ಸೇರಿ ತನ್ನ ಮೂಲ ಪಕ್ಷವನ್ನು ಮನಸ್ವೀ ಬಯ್ಯಲು ಷುರು ಮಾಡುತ್ತಾನೆ. 'ಸೂಳೆ ಜೊತೆ ಸೇರಿಕೊಂಡು ಹೆಂಡತೀನ ಹಾದರಗಿತ್ತೀಂತ ಬಯ್ದಂತೆ' ಎಂಬ ಹೊಸ ಗಾದೆ ಮಾತು ಹೇಳಬೇಕೆನಿಸುತ್ತದೆ. ಇಂದು ನಡೆಯುತ್ತಿರುವುದು ಅಂತಹ ರಾಜಕೀಯ ಹಾದರ (political debauchery). ಪಕ್ಷದ ನಿಷ್ಠಾವಂತರನ್ನು ಕಡೆಗಣಿಸಿ ಹೊಸದಾಗಿ ಬಂದವನಿಗೆ ಟಿಕೆಟ್ಟನ್ನು ಹೊನ್ನ ಹರಿವಾಣದಲ್ಲಿಟ್ಟು ಕೊಡುತ್ತಾರೆ. ಇದು 'ಅಡವಿ ದೆವ್ವ ಬಂದು ಊರ ದೆವ್ವವನ್ನು ಓಡಿಸಿತು' ಎಂಬಂತಾಗಿದೆ. ಅವನು ಬಂದದ್ದರಿಂದ ಮುನಿಸಿಕೊಂಡ ಆ ಪಕ್ಷದ ನಿಷ್ಠಾವಂತನನ್ನು ತೆರೆ ಮರೆಯಲ್ಲಿ ಓರೆಗಣ್ಣಿನಲ್ಲಿ ನೋಡುತ್ತಾ ಇದ್ದ ಬೇರೊಂದು ಪಕ್ಷದವರು ತಮ್ಮತ್ತ ಸೆಳೆದುಕೊಳ್ಳುವ ಹಾದರದ ಕೆಲಸ ಮಾಡುತ್ತಾರೆ!

ಈ ಬಾರಿ ಚುನಾವಣಾ ಅಕ್ರಮಗಳಿಗೆ ಸಾಕಷ್ಟು ತಡೆಯಾಗಿದೆ ಎಂಬುದೇನೋ ನಿಜ. ಆದರೆ ಪೂರ್ಣಪ್ರಮಾಣದಲ್ಲಿ ಆಗಿಲ್ಲ. ಸಾಮೂಹಿಕ ಮದುವೆ ಮಾಡಿದಂತಾಗಿದೆ. ಮದುವೆ ಮಂಟಪ, ಶಾಮಿಯಾನ, ಮೈಕ್‌ಸೆಟ್, ಓಲಗ, ಊಟದ ಖರ್ಚು ಮಾತ್ರ ಉಳಿದಿದೆ. ಆದರೆ ಮದುವೆ ಗಂಡಿಗೆ ಕೊಡಬೇಕಾದ ವರದಕ್ಷಿಣೆ ಮಾತ್ರ ದುಪ್ಪಟ್ಟು ಹೆಚ್ಚಿದೆ! ಮದುವೆಗಳಲ್ಲಿ ಬಂಧುಗಳು ಮದುಮಕ್ಕಳಿಗೆ ಹಿಂದಿನ ಕಾಲದಲ್ಲಿ ಬೆಳ್ಳಿ ದೀಪ, ಸ್ಟೀಲ್ ತಟ್ಟೆ, ಲೋಟ, ಪಾತ್ರೆ-ಪಡಗ ಇತ್ಯಾದಿ ಮುಯ್ಯಿ ಮಾಡುತ್ತಿದ್ದರು. ಈಗ ಗರಿ ಗರಿ ನೋಟು ಇರುವ ಒಂದು ಸುಂದರವಾದ ಲಕೋಟೆಯನ್ನು ಕೊಟ್ಟು ಶುಭ ಹಾರೈಸುತ್ತಾರೆ. ಈ ಹೊಸ ಪದ್ಧತಿಯು ಚುನಾವಣೆಗೂ ವ್ಯಾಪಿಸಿದೆ. 500, 1000 ರೂ. ನೋಟುಗಳನ್ನು ಪ್ರಿಂಟ್ ಮಾಡಿದ್ದೇ ತಪ್ಪಾಗಿದೆ ಎಂದು ಹಲುಬುತ್ತಾರೆ ಗಣಿಧಣಿಗಳಲ್ಲದ ಅಭ್ಯರ್ಥಿಗಳು. ಒಂದು ಸಾಧಾರಣ ಲೆಕ್ಕಾಚಾರದ ಪ್ರಕಾರ ರಾಜ್ಯದ ಮೂರು ಪ್ರಮುಖ ಪಕ್ಷಗಳ ಅಭ್ಯರ್ಥಿಗಳು ಒಂದು ಕ್ಷೇತ್ರದಲ್ಲಿ ಸರಾಸರಿ ತಲಾ 2 ಕೋಟಿ ರೂ. ಗಳಂತೆ ಮತದಾರರಿಗೆ ಹಂಚಿದ್ದಾರೆ. ಉಳಿದೆಲ್ಲ ಪಕ್ಷಗಳು ಮತ್ತು ಸ್ವತಂತ್ರ ಅಭ್ಯರ್ಥಿಗಳು ಸೇರಿ ಹಂಚಿರುವ ಹಣ ಒಂದು ಕ್ಷೇತ್ರದಲ್ಲಿ 2 ಕೋಟಿಗಿಂತ ಕಡಿಮೆ ಏನಿಲ್ಲ. ಈ ಲೆಕ್ಕಾಚಾರದ ಪ್ರಕಾರ ಈ ಬಾರಿಯ ಕರ್ನಾಟಕದ ಚುನಾವಣೆಯಲ್ಲಿ ಒಂದು ಕ್ಷೇತ್ರದಲ್ಲಿ 8 ಕೋಟಿಯಂತೆ ಒಟ್ಟು 224 ಕ್ಷೇತ್ರಗಳಲ್ಲಿ ಎಲ್ಲ ಅಭ್ಯರ್ಥಿಗಳ ಒಟ್ಟು ಖರ್ಚು 1,792 ಕೋಟಿ ರೂ. ಗಳು ಆಗುತ್ತದೆ! ಅಮೇರಿಕಾ ದೇಶವನ್ನು ಬಂಡವಾಳಶಾಹಿ ರಾಷ್ಟ್ರವೆನ್ನುತ್ತಾರೆ. ಆದರೆ ಭಾರತದ ರಾಜಕಾರಣಿಗಳು ನಾವೇನೂ ಕಡಿಮೆಯಲ್ಲ ಎಂಬುದನ್ನು ತೋರಿಸಿದ್ದಾರೆ. ಒಟ್ಟಾರೆ ಈ ಚುನಾವಣೆ ಸಾಬೀತುಪಡಿಸಿರುವ ಒಂದು ಸ್ಪಷ್ಟ ಅಂಶವೆಂದರೆ ಭಾರತದಲ್ಲಿ ಚುನಾವಣೆಗೆ ನಿಲ್ಲುವುದು ಬಂಡವಾಳಶಾಹಿಗಳಿಂದ ಮಾತ್ರ ಸಾಧ್ಯ, ಗಾಂಧೀವಾದಿಗಳಿಂದ ಸುತರಾಂ ಸಾಧ್ಯವಿಲ್ಲ! ಹಣವನ್ನು ನೀರಿನಂತೆ ಖರ್ಚು ಮಾಡುವ ಬಂಡವಾಳಶಾಹಿಗಳು ಗೆದ್ದರೆ ಅದರ ನೂರುಪಟ್ಟು ವಾಪಾಸು ಪಡೆಯುವುದನ್ನು ಬಲ್ಲರು. ನಿಜವಾದ ಅರ್ಥದಲ್ಲಿ ರಾಜಕಾರಣ ಈಗ ಲಾಭದಾಯಕ ಉದ್ದಿಮೆಯಾಗಿದೆ. ಲಾಭವಿಲ್ಲದ ಕೆಲಸಕ್ಕೆ ಅಷ್ಟೊಂದು ಬಂಡವಾಳವನ್ನು ಯಾರಾದರೂ ಏಕೆ ಹಾಕುತ್ತಾರೆ? 'ಪ್ರಯೋಜನಮನುದ್ದಿಶ್ಯ ನ ಮಂದೋಽಪಿ ಪ್ರವರ್ತತೇ' ಎಂಬ ಸೂಕ್ತಿಯಂತೆ ಪ್ರಯೋಜನವಿಲ್ಲದ ಕೆಲಸಕ್ಕೆ ಯಾವ ದಡ್ಡನೂ ಕೈಹಾಕುವುದಿಲ್ಲ.

ಇದುವರೆಗಿನ ಚುನಾವಣೆಗಳನ್ನು ನೋಡಿದ ಮೇಲೆ ಚುನಾವಣಾ ಆಯೋಗವು ಕೇವಲ ಅಭ್ಯರ್ಥಿಗಳು ಮಾಡುವ ಅಬ್ಬರದ ಪ್ರಚಾರದ ಖರ್ಚಿನ ಮೇಲೆ ಹದ್ದಿನ ಕಣ್ಣು ಇಟ್ಟರೆ ಸಾಲದು, ಆಯಾಯ ರಾಜಕೀಯ ಪಕ್ಷಗಳು ನಿಲ್ಲಿಸುವ ಅಭ್ಯರ್ಥಿಗಳ ಆಯ್ಕೆಯ ಕ್ರಮದಲ್ಲಿಯೂ ಸಾಕಷ್ಟು ಬದಲಾವಣೆಗಳನ್ನು ತರಬೇಕೆನಿಸುತ್ತದೆ. ಈ ನಿಟ್ಟಿನಲ್ಲಿ ನಮ್ಮ ಕೆಲವು ಸಲಹೆಗಳು ಇಂತಿವೆ:

1. ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ತಮ್ಮ ಪಕ್ಷದ ನೋಂದಾಯಿತ ಸದಸ್ಯರ ಪಟ್ಟಿಯನ್ನು ಚುನಾವಣಾ ಆಯೋಗಕ್ಕೆ ಮುಂಚಿತವಾಗಿಯೇ ಸಲ್ಲಿಸಬೇಕು.
2. ಯಾವುದೇ ಪಕ್ಷದ ಅಭ್ಯರ್ಥಿಯಾಗಿ ನಿಲ್ಲಲು ಆ ಪಕ್ಷದ ಪ್ರಾಥಮಿಕ ಸದಸ್ಯತ್ವ ಪಡೆದು ಕನಿಷ್ಠ ಐದು ವರ್ಷಗಳಾಗಿರಬೇಕು.
3. ಯಾವುದೇ ಪಕ್ಷದಿಂದ ನಿಲ್ಲ ಬಯಸುವ ಅಭ್ಯರ್ಥಿಯ ಆಯ್ಕೆಯ ಅಧಿಕಾರವು ಈಗ ಇರುವಂತೆ ದಿಲ್ಲಿ ಹೈಕಮಾಂಡಿನಲ್ಲಿ ಕೇಂದ್ರೀಕೃತ ಆಗಬಾರದು.
4. ಆಯಾಯ ಪಕ್ಷದ ಅಭ್ಯರ್ಥಿಗಳ ಆಯ್ಕೆಯು ಅಯಾಯ ಕ್ಷೇತ್ರದ ಆಯಾಯ ಪಕ್ಷದ ನೋಂದಾಯಿತ ಸದಸ್ಯರಿಂದ ಚುನಾವಣೆಯ ಮೂಲಕ ಆಗಬೇಕು. ಅಮೇರಿಕಾದಲ್ಲಿ 'ಪ್ರೈಮರಿ' ಇದ್ದ ಹಾಗೆ.
5. ಪಕ್ಷದ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಸದಸ್ಯರು ಪಕ್ಷದ ಪ್ರಾಥಮಿಕ ಸದಸ್ಯತ್ವ ಪಡೆದು ಕನಿಷ್ಠ ಮೂರು ವರ್ಷಗಳಾಗಿರಬೇಕು.

6. ಚುನಾವಣೆ ಸಮೀಪಿಸಿದಾಗ ಪಕ್ಷಾಂತರ ಮಾಡಿದವರಿಗೆ ಚುನಾವಣೆಗೆ ನಿಲ್ಲುವ ಅಥವಾ ಅಭ್ಯರ್ಥಿಯ ಆಯ್ಕೆಯಲ್ಲಿ ಪಾಲುಗೊಳ್ಳುವ ಅಧಿಕಾರ ಇರಕೂಡದು.
7. ಪಕ್ಷದ ಸದಸ್ಯರಿಂದ ಪಕ್ಷದ ಅಭ್ಯರ್ಥಿಯ ಆಯ್ಕೆಯು ಚುನಾವಣಾ ಆಯೋಗದ ಕಣ್ಗಾವಲಿನಲ್ಲಿ ನಡೆಯಬೇಕು. ಅದರ ಚುನಾವಣಾ ವೆಚ್ಚವನ್ನು ಆಯಾಯ ಪಕ್ಷಗಳೇ ಭರಿಸಬೇಕು.
8. ಆಯಾಯ ಪಕ್ಷದ ಅಭ್ಯರ್ಥಿಗಳು ಪಡೆದ ಮತಗಳ ಆಧಾರದ ಮೇಲೆ ಅತ್ಯಧಿಕ ಮತ ಪಡೆದ ಉಮೇದುವಾರನಿಗೆ ಆಯಾ ಪಕ್ಷದ ಹೈಕಮ್ಯಾಂಡುಗಳು ಚುನಾವಣೆಗೆ ನಿಲ್ಲಲು 'ಬಿ' ಫಾರಂ ನೀಡಬೇಕು.
9. ಪಕ್ಷದಿಂದ ತನಗೆ ಅನ್ಯಾಯವಾಗಿದೆ ಎಂದು ಭಾವಿಸುವ ಯಾರೇ ಆದರೂ ಸ್ವತಂತ್ರವಾಗಿ ಸ್ಪರ್ಧಿಸುವ ಅವಕಾಶವಂತೂ ಈಗ ಇದ್ದ ಹಾಗೆ ಹೊಸ ವ್ಯವಸ್ಥೆಯಲ್ಲೂ ಮುಂದುವರಿಯಬೇಕು. ಅಂಥವನು ಗೆದ್ದ ನಂತರ ಅಧಿಕಾರದಾಸೆಯಿಂದ ಯಾವುದೇ ಪಕ್ಷಕ್ಕೆ ವಲಸೆ ಹೋಗುವಂತಿರಬಾರದು.
10. ಯಾವುದೇ ಪಕ್ಷಕ್ಕೆ ಬಹುಮತ ಬರದೇ ಹೋದರೆ ಅಧಿಕ ಸಂಖ್ಯೆಯ ಸದಸ್ಯರನ್ನು ಹೊಂದಿರುವ ಪಕ್ಷವೇ ಸರ್ಕಾರವನ್ನು ರಚನೆ ಮಾಡಬೇಕು. ಬೆಂಬಲ ನೀಡುವ ಪಕ್ಷದವರಿಗೆ ಮಂತ್ರಿಮಂಡಲದಲ್ಲಿ ಮತ್ತು ನಿಗಮಗಳಲ್ಲಿ ಅವಕಾಶವಿರಬಾರದು.
11. ಸ್ವತಂತ್ರವಾಗಿ ಗೆದ್ದವನು ಸರ್ಕಾರ ರಚನೆಗೆ ಬೆಂಬಲ ನೀಡಬಹುದು. ಆದರೆ ಮಂತ್ರಿಮಂಡಲ ಮತ್ತು ನಿಗಮಗಳಲ್ಲಿ ಭಾಗವಹಿಸುವ ಅಧಿಕಾರ ಇರಬಾರದು.
12. ಚುನಾವಣಾ ಅಕ್ರಮಗಳನ್ನು ಪರಿಶೀಲಿಸಲು ವಿಶೇಷ ನ್ಯಾಯಪೀಠ ಇರಬೇಕು. ಪರೀಕ್ಷೆಯಲ್ಲಿ ನಕಲು ಮಾಡುವ ವಿದ್ಯಾರ್ಥಿಗಳನ್ನು ಕೂಡಲೇ ಡಿಬಾರ್ ಮಾಡುವಂತೆ, ಚುನಾವಣಾ ಅಕ್ರಮಗಳನ್ನು ಎಸಗುವ ಅಭ್ಯರ್ಥಿಗಳನ್ನು ಕೂಡಲೇ ಡಿಬಾರ್ ಮಾಡಬೇಕು.

ಹೀಗಾದಲ್ಲಿ ಎಲ್ಲ ಪಕ್ಷಗಳ ಉಮೇದುವಾರರು ಸ್ಥಳೀಯ ಜನರಿಂದ ಆರಿಸಿದವರಾಗುತ್ತಾರೆ. ಗೆದ್ದರೆ ಸ್ಥಳೀಯರ ಕಷ್ಟಸುಖಗಳಿಗೆ ಸ್ಪಂದಿಸುವ ನಿಜವಾದ ಜನಪ್ರತಿನಿಧಿ ಅವರಾಗುತ್ತಾರೆ. ಭ್ರಷ್ಟಾಚಾರದ ಮೊದಲ ಹೆಜ್ಜೆಯಾದ ಟಿಕೆಟ್ ಹೋರಾಟಕ್ಕೆ ಕಡಿವಾಣ ಹಾಕಿದಂತಾಗುತ್ತದೆ. ಇದರಿಂದ ಅವನ ತಲೆ ಇವನು, ಇವನ ತಲೆ ಅವನು ತೆಗೆಯುವ ದಿಲ್ಲಿಯ ಹೈಕಮ್ಯಾಂಡಿನ ಹೈಜಾಕ್ ರಾಜಕೀಯಕ್ಕೆ ತಡೆಯೊಡ್ಡಿದಂತಾಗುತ್ತದೆ. ಇಷ್ಟವಾಗದ ಗಂಡಿನ ಕೊರಳಿಗೆ ಒತ್ತಾಯಪೂರ್ವಕವಾಗಿ ಮಗಳಿಂದ ತಾಳಿ ಕಟ್ಟಿಸುವ 'Political God Father' ಗಳ ಕೊಳಕು ರಾಜಕೀಯ ನಿಲ್ಲುತ್ತದೆ. ಈ ಮೇಲ್ಕಂಡ 'ದ್ವಾದಶ ಸೂತ್ರ'ಗಳಲ್ಲಿ ಪ್ರಮುಖವಾದ ನಿಯಮ ಅಂದರೆ ಯಾವುದೇ ಪಕ್ಷದ ಅಭ್ಯರ್ಥಿಗೆ ಆ ಪಕ್ಷದ ಪ್ರಾಥಮಿಕ ಸದಸ್ಯತ್ವ ಪಡೆದು ಕನಿಷ್ಠ ಐದು ವರ್ಷಗಳಾಗಿರಬೇಕೆಂಬ ಒಂದು ನಿಯಮ ಜಾರಿಗೆ ಬಂದಿದ್ದರೂ ಈ ಬಾರಿಯ ಚುನಾವಣೆಯಲ್ಲಿ ಎಷ್ಟೋ ರಾಜಕಾರಣಿಗಳು 'ತಲೆದಂಡ' ತೆರಬೇಕಾಗುತ್ತಿತ್ತು!

ಲಾಗ (ಹೊಡಿಯೋ) ಮಂಗ, ಲಾಗ (ಹೊಡಿಯೋ)
ಬಗ್ಗಿ ಧಣಿಯರ ಮುಂದೆ ಲಾಗ ಹೊಡಿಯೋ!
ಹಾಕು (ಜಂತರ್) ಲಾಗ, ಹಾಕು (ಮಂತರ್) ಲಾಗ
ನೆರೆದ (ಮತದಾರರಿಗೆ) ಶರಣು ಹೊಡಿಯೋ ! - (ಚೆನ್ನವೀರ ಕಣವಿ ಕವಿತೆಯ 'ಪಾಠಾಂತರ')

ಜಾಗೃತ ಮತದಾರರೇ! ಇಂದಿನ ಚುನಾವಣೆಗಳು ಶ್ರೀಮಂತರ ಕುದುರೆ ಜೂಜಾಟದಂತಾಗಿವೆ. ನೀವು ಜೂಜಿನ ಕುದುರೆಗಳಾಗದಿರಿ, ಅದರ ಸವಾರರೂ ಆಗದಿರಿ. ಚುನಾವಣೆ ಸಂದರ್ಭದಲ್ಲಿ ಪ್ರಜಾಪ್ರಭುತ್ವದ ಧಣಿಗಳಾದ ನಿಮ್ಮ ಮುಂದೆ ಲಾಗ (ಗಾಳ?) ಹಾಕುತ್ತಾರೆ. ಗೆದ್ದು ವಿಧಾನಸೌಧ ಸೇರಿದ ಮೇಲೆ, ಗೆದ್ದ ಧಣಿಯನ್ನು ಕಾಣಲು ನೀವು ಬೆಂಗಳೂರಿಗೆ ಹೋದರೆ ಸಿಗದೆ ವಿಧಾನಸೌಧದ ಎದುರು ಇರುವ ಕಬ್ಬನ್ ಪಾರ್ಕಿಗೆ ಹೋಗಿ ತಿಪ್ಪರಲಾಗ ಹಾಕಬೇಕಾದ ಮಂಗ್ಯಗಳಾಗಬೇಕಾಗುತ್ತದೆ! ಎಚ್ಚರ, ಎಚ್ಚರ, ಎಚ್ಚರ!

20.4.2008

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑